ಕರ್ನಾಟಕ ಸರ್ಕಾರ

(ಕೃಷಿ ಇಲಾಖೆ)

ಸಂಖ್ಯೆ: ಸಾಗೊವಿ/ಕೃಪಸಲು/2014-15

ಕೃಷಿ ಆಯುಕ್ತರ ಕಾರ್ಯಾಲಯ,
ಶೇಷಾದ್ರಿ ರಸ್ತೆ, ಬೆಂಗಳೂರು,
ದಿನಾಂಕ: 08.07.2014.

## ಸುತ್ತೋಲೆ

ವಿಷಯ : ಎರೆಹುಳು ಗೊಬ್ಬರ ಮತ್ತು ಸಿಟಿ ಕಾಂಪೋಸ್ಟ್ ಸರಬರಾಜು ಕುರಿತು.

ಉಲ್ಲೇಖ: ಈ ಕಛೇರಿ ಸುತ್ತೋಲೆ ಸಂ:ಸಾಗೊವಿ/ದಕ/ಇ-ಟೆ/2014-15, ದಿನಾಂಕ:28.05.2014.

~~~~~~~~~~~~~~~~

ಎರೆಹುಳು ಗೊಬ್ಬರ ಮತ್ತು ಸಿಟಿ ಕಾಂಪೋಸ್ಟ್ ಸರಬರಾಜಿಗಾಗಿ ದರ ಕರಾರನ್ನು ನಿಗದಿಪಡಿಸಿ ಉಲ್ಲೇಖಿತ ಸುತ್ತೋಲೆಯಲ್ಲಿ ಈಗಾಗಲೇ ಎಲ್ಲಾ ಜಿಲ್ಲೆಗಳಿಗೂ ಕಳುಹಿಸಲಾಗಿರುತ್ತದೆ. 2014-15 ನೇ ಸಾಲಿಗೆ ಅವಶ್ಯವಿರುವ ಈ ಪರಿಕರಗಳಿಗೆ ಜಿಲ್ಲೆಗಳಿಂದ ಬೇಡಿಕೆ ಸಲ್ಲಿಸಿ ಸರಬರಾಜು ಪಡೆಯುತ್ತಿರುವುದು ಸರಿಯಷ್ಟೆ. ಸದರಿ ಸುತ್ತೋಲೆಯಲ್ಲಿ ಸೂಚಿಸಿರುವಂತೆ ಎರೆಹುಳು ಗೊಬ್ಬರ ಮತ್ತು ಸಿಟಿ ಕಾಂಪೋಸ್ಟ್ ಪರಿಕರಗಳಿಗೆ ಶೇ.60 ರಷ್ಟು ಬೇಡಿಕೆಯನ್ನು ಕರ್ನಾಟಕ ಕಾಂಪೋಸ್ಟ್ ಅಭಿವೃದ್ಧಿ ನಿಗಮ, ಬೆಂಗಳೂರು ಇವರಿಗೆ ಸಲ್ಲಿಸುವಂತೆ ಸೂಚನೆ ಇರುತ್ತದೆ. ಆದರೆ, ಈ ಎರಡು ಪರಿಕರಗಳನ್ನು ಕರ್ನಾಟಕ ಕಾಂಪೋಸ್ಟ್ ಅಭಿವೃದ್ಧಿ ನಿಗಮ, ಬೆಂಗಳೂರು ಇವರನ್ನು ಬಿಟ್ಟು ಇತರೆ ಸಂಸ್ಥೆಗಳಿಂದ ಸರಬರಾಜು ಪಡೆಯುತ್ತಿರುವುದು ಇಲಾಖೆಯ ಗಮನಕ್ಕೆ ಬಂದಿರುತ್ತದೆ.

ಆದ್ದರಿಂದ, ಜಿಲ್ಲೆಯ ಬೇಡಿಕೆಯಲ್ಲಿ ಮೊದಲ ಶೇ.60 ಭಾಗದಷ್ಟನ್ನು ಕರ್ನಾಟಕ ಕಾಂಪೋಸ್ಟ್ ಅಭಿವೃದ್ಧಿ ನಿಗಮ, ಬೆಂಗಳೂರು ಇವರಿಗೆ ಜಿಲ್ಲೆ ಬೇಡಿಕೆ ಸಲ್ಲಿಸಿ ಸರಬರಾಜು ಪಡೆಯತಕ್ಕದ್ದು. ನಂತರ, ಉಳಿದ ಶೇ.40 ಭಾಗಕ್ಕೆ ಇತರೆ ಸಂಸ್ಥೆಗಳಿಗೆ ಬೇಡಿಕೆ ಸಲ್ಲಿಸಿ ಸರಬರಾಜು ಪಡೆಯುವುದು. ಈ ಬಗ್ಗೆ ಕೈಗೊಂಡ ಕ್ರಮವನ್ನು ಈ ಕಛೇರಿಗೆ ತಪ್ಪದೇ ವರದಿಮಾಡಲು ಸಹ ತಿಳಿಸಿದೆ.

ಇದಲ್ಲದೆ, ಕರ್ನಾಟಕ ಕಾಂಪೋಸ್ಟ್ ಅಭಿವೃದ್ಧಿ ನಿಗಮ, ಬೆಂಗಳೂರು ಇವರಿಗೆ ಹಿಂದಿನ ವರ್ಷಗಳ ಸರಬರಾಜಿನ ಬಾಬ್ತು ಬಾಕಿ ಇರುವ ಹಣವನ್ನು ಪಾವತಿಮಾಡುವಂತೆ ಸಾಕಷ್ಟುಬಾರಿ ತಿಳಿಸಿದ್ದರೂ ಇನ್ನೂ ಪಾವತಿ ಬಾಕಿ ಇರುವುದು ಕಂಡುಬಂದಿರುತ್ತದೆ. ಈ ಕಛೇರಿಯಿಂದ ಪತ್ರ ವ್ಯವಹಾರಕ್ಕೆ ಆಸ್ಪದ ಕೊಡದೇ ಈ ಬಗ್ಗೆ ಹೆಚ್ಚಿನ ಗಮನ ವಹಿಸಿ ಕರ್ನಾಟಕ ಕಾಂಪೋಸ್ಟ್ ಅಭಿವೃದ್ಧಿ ನಿಗಮ, ಬೆಂಗಳೂರು ಇವರಿಗೆ ಬಾಕಿ ಇರುವ ಮೊತ್ತವನ್ನು ಕೂಡಲೇ ಚುಕ್ತಗೊಳಿಸಲು ಸೂಚಿಸಿದೆ.

ಕೃಷಿ ನಿರ್ದೇಶಕರು

1. ಪ್ರತಿಯನ್ನು ಎಲ್ಲಾ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರುಗಳಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
2. ಪ್ರತಿಯನ್ನು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಕಾಂಪೋಸ್ಟ್ ಅಭಿವೃದ್ಧಿ ನಿಗಮ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.

E:\Circulars 2010-11.doc
~~~~~~~~~~~~~~~~